ಸಿರಿಧಾನ್ಯ ಬೆಳೆಗಳಲ್ಲಿ ಸುಧಾರಿತ ಬೇಸಾಯ ಕ್ರಮಗಳು (ನವಣೆ ಮತ್ತು ಸಾಮೆ)

ನವಣೆ, ಒಂದು ಮುಖ್ಯವಾದ ಕಿರುಧಾನ್ಯ ಬೆಳೆಯಾಗಿದ್ದು ಹೆಚ್ಚಾಗಿ ಹಾವೇರಿ, ಬಳ್ಳಾರಿ, ವಿಜಯಪುರ, ಬೆಳಗಾವಿ, ರಾಯಚೂರು, ಕೊಪ್ಪಳ, ಚಿತ್ರದುರ್ಗ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ 6.79 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು, 12.77 ಟನ್ ಉತ್ಪಾದನೆಯಿದ್ದು ಸರಾಸರಿ ಇಳುವರಿ ಪ್ರತಿ ಎಕರೆಗೆ 106 ಕಿ.ಗ್ರಾಂ ಇರುವುದು. ಸಾಮೆ ಬೆಳೆಯು ಉತ್ತರ ಕರ್ನಾಟಕದ ಮುಖ್ಯ ಸಿರಿಧಾನ್ಯ ಬೆಳೆಯಾಗಿದ್ದು, ಈ ಬೆಳೆಯನ್ನು ಇಡೀ ಹಾಗೂ ಮಿಶ್ರ ಬೆಳೆಯಾಗಿ ಬೆಳೆಯಲಾಗುತ್ತಿದೆ. ಕಾಳಿನಲ್ಲಿ ಕಡಿಮೆ ಸಕ್ಕರೆ ಪ್ರಮಾಣ, ಕ್ರಮೇಣ ಜೀರ್ಣವಾಗುವ ಶರ್ಕರ ಪಿಷ್ಟ (ಕಾರ್ಬೋಹೈಡ್ರೇಟ್ಸ್), ಹೆಚ್ಚಿನ ಪ್ರಮಾಣದ ಕೊಬ್ಬು, ಪ್ರಿಷ್ಟ, ಲವಣಾಂಶಗಳನ್ನು ಹೊಂದಿರುವುದು. ಕಾಳಿನಲ್ಲಿ ನಾರಿನಂಶ ಹೆಚ್ಚಾಗಿದ್ದು ಕ್ಯಾಲ್ಸಿಯಂ ಮತ್ತು ರಂಜಕವನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿದೆ. ಸಿಹಿ, ಮೂತ್ರ ರೋಗಿಗಳಿಗೆ ಉತ್ತಮ ಆಹಾರ ಎಂದು ಸಂಶೋಧನೆಯಿಂದ ಧೃಡಪಡಿಸಲಾಗಿದೆ. ಸಾವೆಗೆ ಇರುವ ಗುಣವಿಶೇಷಗಳಿಂದ ಈ ಬೆಳೆ ಹೆಚ್ಚು ಜನಪ್ರಿಯವಾಗಲು ಕಾರಣವಾಗಬಲ್ಲವು. ಕಲ್ಲುಗೊಚ್ಚಿನಿಂದ ಕೂಡಿದ ಭೂಮಿ, ಗುಡ್ಡದ ಇಳಿಜಾರು ಕಡಿಮೆ ಫಲವತ್ತತೆಯ ಮಣ್ಣಿನಲ್ಲಿ ಹಾಗೂ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿಯೂ ಈ ಬೆಳೆ ಬೆಳೆಯಬಹುದು.

ತಳಿಗಳ ವಿವರ:

ತಳಿಗಳು	ವಲಯ ಮತ್ತು ಸನ್ನಿವೇಶ	ಬಿತ್ತನೆಯ ಕಾಲ	ಅವಧಿ (ದಿನಗಳು/ವಿಶೇಷತೆ)
ನವಣೆ			
ಡಿ.ಎಚ್.ಎಫ್.ಟಿ. 109–3	3 & 8	ಜೂನ್–ಜುಲೈ	90
ಹೆಚ್. ಎನ್–46	2 & 3	ಜೂನ್–ಜುಲೈ	90 ದಿನಗಳು ಹೆಚ್ಚಿನ ಕಾಳು ಹಾಗೂ ಹೆಚ್ಚಿನ ಮೇವಿನ ಇಳುವರಿ.
ಸಾಮೆ			
ಡಿಎಚ್ಎಲ್ಎಮ್ 36–3	3 ಮತ್ತು 8	ಜೂನ್	90
ಸುಕ್ಷೇಮ	8	ಜೂನ್	90

ಬಿತ್ತನೆಗೆ ಬೇಕಾಗುವ ಬೇಸಾಯ ಸಾಮಗ್ರಿಗಳು (ಪ್ರತಿ ಎಕರೆಗೆ)

ಬಿತ್ತನೆ ಬೀಜ (ನವಣೆ): 2.0 ರಿಂದ 3.0 ಕಿ.ಗ್ರಾಂ.

ಬಿತ್ತನೆ ಬೀಜ (ಸಾಮೆ): 5.0 ರಿಂದ 6.0 ಕಿ.ಗ್ರಾಂ.

ಸಾವಯವ ಗೊಬ್ಬರಗಳು

ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ :2.4 ಟನ್

ಜೈವಿಕ ಗೊಬ್ಬರ (ಅಜೋಸ್ಪರಿಲಂ) : 200 ಗ್ರಾಂ

ರಾಸಾಯನಿಕ ಗೊಬ್ಬರಗಳು

ಸಾರಜನಕ : 12 ಕಿ.ಗ್ರಾಂ

ರಂಜಕ : 6 ಕಿ.ಗ್ರಾಂ.

ಪೋಟ್ಯಾಷ್ : 6 ಕಿ.ಗ್ರಾಂ.

ನವಣೆ ಬೆಳೆಗೆ ಸೂಕ್ತವಾದ ಮಣ್ಣು ಣ: ಎರವಲು ಮಣ್ಣು, ಸೂಕ್ತವಾಗಿದ್ದು, ರಸಸಾರ 5.5–7.0 ರ ವರೆಗೆ ಇರಬೇಕು.

ಸಾಮೆ ಬೆಳೆಗೆ ಸೂಕ್ತವಾದ ಮಣ್ಣು: ಕಲ್ಲುಗೊಚ್ಚಿನಿಂದ ಕೂಡಿದ ಭೂಮಿ, ಗುಡ್ಡದ ಇಳಿಜಾರು ಕಡಿಮೆ ಫಲವತ್ತತೆಯ ಮಣ್ಣು, ಸೂಕ್ತವಾಗಿದ್ದು, ರಸಸಾರ 5.5–6.5 ರ ವರೆಗೆ ಇರಬೇಕು.

ಬಿತ್ತನೆ:

ಬಿತ್ತನೆಗೆ 2–3 ವಾರಗಳ ಮೊದಲು ಸಾವಯವ ಗೊಬ್ಬರವನ್ನು ಮಣ್ಣಿನಲ್ಲಿ ಬೆರೆಸಬೇಕು. ಬಿತ್ತನೆ ಬೀಜವನ್ನು 22.5 ರಿಂದ 30 ಸೆಂ.ಮೀ. ಅಂತರದ ಸಾಲುಗಳಲ್ಲಿ 4 ಸೆಂ. ಮೀ. ಗಿಂತ ಹೆಚ್ಚು ಆಳವಿಲ್ಲದಂತೆ ಬೀಜದಿಂದ ಬೀಜಕ್ಕೆ 5.0–7.5 ಸೆಂ.ಮೀ. ಅಂತರವಿರುವಂತೆ ಬಿತ್ತನೆ ಮಾಡಬೇಕು. ಶಿಫಾರಸ್ಸಿನ ಶೇ. 50 ರಷ್ಟು ಸಾರಜನಕ, ಪೂರ್ತಿ ರಂಜಕ ಮತ್ತು ಪೋಟ್ಯಾಷ್ ಗೊಬ್ಬರಗಳನ್ನು ಬಿತ್ತುವಾಗ ಮಣ್ಣಿನಲ್ಲಿ ಬೆರೆಸಬೇಕು. ಸಾಧ್ಯವಾದಲ್ಲಿ ರಸಗೊಬ್ಬರ ಹಾಗೂ ಬೀಜವನ್ನು ಒಟ್ಟಿಗೆ ಬಿತ್ತುವ ಸಂಯುಕ್ತ ಕೂರಿಗೆಯಿಂದ ಬಿತ್ತುವುದು ಸೂಕ್ತ. ಬಿತ್ತನೆಯಾದ 30 ದಿನಗಳ ನಂತರ ಉಳಿದ ಶೇ. 50 ರಷ್ಟು (15 ಕಿ.ಗ್ರಾಂ) ಸಾರಜನಕವನ್ನು ಮೇಲು ಗೊಬ್ಬರವಾಗಿ ಕೊಡಬೇಕು.

ನವಣೆಯಲ್ಲಿ ಸಸ್ಯ ಸಂರಕ್ಷಣಾ ಕ್ರಮಗಳು (ರೋಗಗಳು):

ಬೆಂಕಿ ರೋಗ ಮತ್ತು ಕಂದು ಚುಕ್ಕೆ ರೋಗ

ಲಕ್ಷಣ ಮತ್ತು ಹಾನಿ: ಈ ರೋಗಗಳ ತೀವ್ರತೆ ಹೆಚ್ಚಾಗಿ ಕಂಡುಬರುತ್ತಿದೆ

ನಿರ್ವಹಣಾ ಕ್ರಮಗಳು: ರೋಗದ ತೀವ್ರತೆ ಹೆಚ್ಚಾಗಿದ್ದಲ್ಲಿ ಮ್ಯಾಂಕೊಜೆಬ್ 75 ಡಬ್ಲ್ಯೂ.ಪಿ. 2 ಗ್ರಾಂ. ಶಿಲೀಂಧ್ರನಾಶಕವನ್ನು 1 ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಕಾಡಿಗೆ ರೋಗ

ಲಕ್ಷಣ ಮತ್ತು ಹಾನಿ: ತೆನೆಯಲ್ಲಿ ಕೆಲವು ಕಾಳುಗಳ ಮೇಲೆ ರೋಗ ಕಂಡು ಬಂದು ಕಾಳಾಗಿ ಬೆಳೆಯುವ ಬದಲು ಶಿಲೀಂಧ್ರ ಕೋಶಗಳಾಗಿ ಮಾರ್ಪಾಡಾಗುತ್ತವೆ.

ನಿರ್ವಹಣಾ ಕ್ರಮಗಳು: ಒಂದು ಕಿ.ಗ್ರಾಂ. ಬೀಜಕ್ಕೆ ಕಾರ್ಬಾಕ್ಸಿನ್ 37.5% + ಥೈರಾಮ 37.5% ಡಬ್ಲ್ಯೂ.ಪಿ. ಶೀಲಿಂಧ್ರನಾಶಕದಿಂದ ಬೀಜೋಪಚಾರ ಮಾಡಿ ಬಿತ್ತಬೇಕು.

ಹಸಿರು ತೆನೆ ರೋಗ :

ಲಕ್ಷಣ ಮತ್ತು ಹಾನಿ: ತೆನೆಯು ಹೂವಿನಿಂದ ಕುಡಿರದೇ ಸಣ್ಣ ಸಣ್ಣ ಹಲವಾರು ಎಲೆಗಳಾಗಿ ಮಾರ್ಪಾಡಾಗುತ್ತವೆ.

ನಿರ್ವಹಣಾ ಕ್ರಮಗಳು:

ಒಂದು ಕಿ.ಗ್ರಾಂ. ಬೀಜಕ್ಕೆ 2 ಗ್ರಾಂ ಮೆಟಲಾಕ್ಸಿಲ್ (4%) + ಮ್ಯಾಂಕೊಜೆಬ್ (68%) 72 ಡಬ್ಲೂಪಿ ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಿ ಬಿತ್ತಬೇಕು.

ಸಾಮೆ ಬೆಳೆಯಲ್ಲಿ ಕಾಂಡಕೊರಕ ಕೀಟದ ನಿರ್ವಹಣೆ:

ಲಕ್ಷಣ ಮತ್ತು ಹಾನಿ: ಮರಿಹುಳುಗಳು ಎಲೆಗಳಲ್ಲಿ ಸಣ್ಣ ಸಣ್ಣ ರಂಧ್ರಗಳನ್ನುಂಟುಮಾಡುತ್ತವೆ ಹಾಗೂ ಕಾಂಡದ ಮಧ್ಯ ಭಾಗವನ್ನು ಕೊರೆಯುವುದರಿಂದ ಸುಳಿ ಒಣಗಲು ಪ್ರಾರಂಭವಾಗುತ್ತದೆ.

ನಿರ್ವಹಣಾ ಕ್ರಮಗಳು: ಮುಂಗಾರಿನ ಪ್ರಾರಂಭದಲ್ಲಿಯೇ ಬಿತ್ತನೆಮಾಡುವುದ ರಿಂದ ಕಾಂಡ ಕೊರಕ ಕೀಟಗಳ ಬಾಧೆಯನ್ನು ತಡೆಗಟ್ಟಬಹುದು.

ಅಂತರ ಬೇಸಾಯ

ಕಳೆ ನಿರ್ವಹಣೆಗಾಗಿ 2–3 ಬಾರಿ ಅಂತರ ಬೇಸಾಯದೊಂದಿಗೆ ಒಂದು ಸಲ ಕಳೆ ತೆಗೆಯಬೇಕು.

ಮಿಶ್ರ ಬೆಳೆ (ನವಣೆ)

ಈ ಬೆಳೆಯ ಜೊತೆಗೆ ತೊಗರಿ, ಎಳ್ಳು, ಹೆಸರು, ಮಡಕಿ ಬೆಳೆಗಳನ್ನು 4:2 ಪ್ರಮಾಣದಲ್ಲಿ ಮಿಶ್ರ ಬೆಳೆಯಾಗಿ ಬೆಳೆಯುವುದು ಲಾಭದಾಯಕ.





ಇಳುವರಿ (ಎಕರೆಗೆ)

ನವಣೆ

ಕಾಳು	7–8 ಕ್ವಿಂಟಾಲ್
ಮೇವು	16–18 ಕ್ವಿಂಟಾಲ್

ಸಾಮೆ

ಕಾಳು	6–8 ಕ್ವಿಂಟಾಲ್
ಮೇವು	2–2.4 ಕ್ವಿಂಟಾಲ್

ಖರ್ಚು ಇಲ್ಲದ ಬೇಸಾಯ ಕ್ರಮಗಳು

- ಕೆಂಪು ಮಣ್ಣಿನ ಭೂಮಿಯಲ್ಲಿ ಜೂನ್ ಕೊನೆಯೊಳಗಾಗಿ ಬಿತ್ತನೆ ಮಾಡಬೇಕು.
- 4 ಸೆಂ. ಮೀ. ಕ್ಕಿಂತ ಹೆಚ್ಚು ಆಳದಲ್ಲಿ ಬಿತ್ತನೆ ಮಾಡಬಾರದು.

ಲೇಖಕರು : ಇಂ. ವೀಣಾ, ಟಿ.
ಡಾ. ತಿಮ್ಮಣ್ಣ
ಡಾ. ಶ್ರೀವಾಣಿ ಜಿ. ಎನ್.
ಡಾ. ಮಲ್ಲರೆಡ್ಡಿ
ಡಾ. ಅಫ್ಸನಾ ಬಾನು ಮಲಿಕ್
ಪುಟ ವಿನ್ಯಾಸ & ಅಕ್ಷರ ಜೋಡಣೆ : ಶ್ರೀ. ದೇವರಾಜ ನಾಯಕ
ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ಪ್ರಕಾಶಕರು
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ ರಾಯಚೂರು

ಗೌರವ ಸಲಹೆಗಾರರು
ಡಾ. ಎ ಆರ್ ಕುರುಬರ
ವಿಸ್ತರಣ ನಿರ್ದೇಶಕರು
ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ ರಾಯಚೂರು

::ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ::
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ,
ಅಂಚೆ ಪೆಟ್ಟಿಗೆ ಸಂಖ್ಯೆ–329, ರಾಯಚೂರು–584104
ದೂರವಾಣಿ ಸಂಖ್ಯೆ: 0832–220196

ಕೃಷಿ ಮಾಹಿತಿಗಾಗಿ ಸ್ಕ್ಯಾನ್ ಮಾಡಿ ಫಾಲೋ ಮಾಡಿ

UASR/PC/LL-27A/2025-26

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ ರಾಯಚೂರು

ಸಿರಿಧಾನ್ಯ ಬೆಳೆಗಳಲ್ಲಿ ಸುಧಾರಿತ ಬೇಸಾಯ ಕ್ರಮಗಳು



2025-26

ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ
ರಾಯಚೂರು, 584104

ಶುಲ್ಕ ರಹಿತ ರೈತರ ಸಹಾಯವಾಣಿ ಸಂಖ್ಯೆ:
1800–425–0470

ಕೃಷಿ ವಿ

ಐ.ಸಿ